**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 739/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 11**

**ದಿನಾಂಕಃ 03.12.2025** **ಸಿಡಬ್ಲ್ಯೂ 15**

| | |
|---|---|
| ಹೆಸರು | ನಾಗರಾಜ ನಾಯ್ಕ ಸಿ |
| ತಂದೆ ಹೆಸರು | ಚಂದ್ರಾ ನಾಯ್ಕ |
| ವಯಸ್ಸು | 45 ವರ್ಷ |
| ಉದ್ಯೋಗ | ಇಂಜಿನಿಯರ್ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 2022 ರಿಂದ ಮಾರ್ಚ್ 2025 ರವರೆಗೆ ಎಇಇ ಬೆಸ್ಕಾಂ ನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಹರಿಹರ ಗ್ರಾಮಾಂತರ ಠಾಣೆಯಿಂದ ಮಿಡ್ಲಕಟ್ಟೆ ಗ್ರಾಮದಿಂದ ಆಕಾಶ ರೈಸ್ ಇಂಡಸ್ಟ್ರಿಯಲ್ಲಿ ವಿದ್ಯುತ್ ಸರಬರಾಜು ಇದೆ ಅದಥವಾ ಇಲ್ಲವೇ ಎಂದು ಪರಿಶೀಲನೆ ಮಾಡಿ ವರದಿ ನೀಡಲು ಕೋರಲು ಅದರಂತೆ ನಾನು ದಿ 07.02.2023 ರಂದು ಮಧ್ಯಾಹ್ನ 02 ಗಂಟೆಯಿಂದ 02.30 ರವರೆರೆ ಮಿಡ್ಲಕಟ್ಟೆ ಗ್ರಾಮದ ಆಕಾಶ ರೈಸ್ ಇಂಡಸ್ಟ್ರಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ವಿದ್ಯುತ್ ಸರಬರಾಜು ಮಾಡುವ ದೇವರಬೆಳಕೆರೆಗ 66/11 ಕೆವಿ ವಿ ವಿ ಕೇಂದ್ರದ ಎಫ್ 5 ಮಿಟ್ಲಕಟ್ಟೆ ಕೈಗಾರಿಕೆ ಫೀಡರನ 11 ಕೆವಿ ಮಾರ್ಗವು ಚಾಲನೆಯಲ್ಲಿರುತ್ತದೆ ಎಂದು ವರದಿ ನೀರಿರುತ್ತೇನೆ. ಸಾಕ್ಷಿಯು ಗುರುತಿಸಿದ ವರದಿಯನ್ನು ನಿಪಿ15 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎನ್ ಕೆ ವಕೀಲರಿಂದಃ**

ನಿಪಿ.14 ನನ್ನ ವರದಿಯಲ್ಲಿ ಪೊಲೀಸರು ಮನವಿ ನೀಡಿದ ವರದಿಯಲ್ಲಿ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿ. ಪೊಲೀಸರು ನೀಡಿದ ಮನವಿ ನಮ್ಮ ಕಚೇರಿಯಲ್ಲಿ ಇದೆ. ನಾನು ಖುದ್ದಾಗಿ ಸ್ಥಳಕ್ಕೆ ಬೇಟಿ ನೀಡಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಶಾಖಾಧಿಕಾರಿಗಳು ಬೇಟಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನಾಗಲಿ ನಮ್ಮ ಶಾಖಾಧಿಕಾರಿಗಳಾಗಲಿ ಸ್ದ.ಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಶಾಖಾಧಿಕಾರಿಗಳು ಬೇಟಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ